## ನಿಮ್ಮೊಡನೆ

# ವಿಜ್ಞಾನ ದೀವಿಗೆಯ ಹಿಡಿಯಬನ್ನಿ...

ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಸಂಬಂಧಿಸಿದಂತೆ ವಿಶ್ವದರ್ಜೆಯ ಸಂಸ್ಥೆಗಳು ನಮ್ಮಲ್ಲಿ ಕಡಿಮೆ. ಹೈಸ್ಕೂಲ್ ನಂತರ ವಿಜ್ಞಾನವನ್ನು ಪ್ರಮುಖ ವಿಷಯವನ್ನಾಗಿ ಕಲಿಯಲು ಹಂಬಲಿಸುವ ವಿದ್ಯಾರ್ಥಿಗಳ ಸಂಖ್ಯೆಯೂ ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಿದೆ. ವಿಜ್ಞಾನದಲ್ಲಿ ಉನ್ನತ ಕಲಿಕೆಯ ಹಂಬಲವುಳ್ಳ ವಿದ್ಯಾರ್ಥಿಗಳು ವಿದೇಶಗಳ ದಾರಿ ಹಿಡಿಯುತ್ತಿದ್ದಾರೆ.


ಈಶ್ವರ್

ವಿಶ್ವದ ವಿಜ್ಞಾನ ನಗರಗಳಲ್ಲಿ ಬೆಂಗಳೂರು ಮತ್ತು ಕೋಲ್ಕತ್ತಾಗಳು ಮಾತ್ರ ಸ್ಥಾನ ಪಡೆದಿರುವುದು ಜಾಗತಿಕ ವಿಜ್ಞಾನ ಕ್ಷೇತ್ರದಲ್ಲಿ ಭಾರತದ ಸ್ಥಾನ ಯಾವುದೆನ್ನುವುದನ್ನು ಸೂಚಿಸುವಂತಿದೆ. ಕಳೆದ ವರ್ಷ 'ನೇಚರ್ ನಿಯಕಕಾಲಿಕದ ವಿಶ್ವ ರ‍್ಯಾಂಕಿಂಗ್ ಪಟ್ಟಿ'ಯಲ್ಲಿ 93ನೇ ಸ್ಥಾನದಲ್ಲಿದ್ದ ಬೆಂಗಳೂರು, ಈ ಸಲ 97ನೇ ಸ್ಥಾನಕ್ಕೆ ಕುಸಿದಿದೆ. ಆದರೆ, 121ನೇ ಸ್ಥಾನದಲ್ಲಿದ್ದ ಕೋಲ್ಕತ್ತಾ 99ನೇ ಸ್ಥಾನ ಪಡೆಯುವುದರೊಂದಿಗೆ ತನ್ನ ಪರಿಸ್ಥಿತಿಯನ್ನು ಸುಧಾರಿಸಿಕೊಂಡಿದೆ. ದೇಶದ ಇತರ ನಗರಗಳ ಸ್ಥಿತಿ ಮತ್ತಷ್ಟು ಹೀನಾಯವಾಗಿದೆ. ಮುಂಬಯಿ 128ನೇ ಸ್ಥಾನದಲ್ಲಿದ್ದರೆ, ದೆಹಲಿ 145ನೇ ಸ್ಥಾನದಲ್ಲಿದೆ. ಕಳೆದ ಸಲ 169ನೇ ಸ್ಥಾನದಲ್ಲಿದ್ದ ಪುಣೆ ಈ ಸಲ 200ರ ಪಟ್ಟಿಯಲ್ಲೂ ಸ್ಥಾನ ಪಡೆದಿಲ್ಲ.

ಅತ್ಯುತ್ತಮ ವಿಜ್ಞಾನ ನಗರಗಳ ಯಾದಿಯಲ್ಲಿ ಬೀಜಿಂಗ್ ಮೊದಲ ಸ್ಥಾನದಲ್ಲಿರುವುದು ವಿಜ್ಞಾನ ಕ್ಷೇತ್ರಕ್ಕೆ ಚೀನಾ ನೀಡುತ್ತಿರುವ ಪ್ರಾಮುಖ್ಯವನ್ನು ಸೂಚಿಸುವಂತಿದೆ. ಕೊರೊನಾ ಕಾರಣದಿಂದಾಗಿ ಕುಖ್ಯಾತಿ ಗಳಿಸಿರುವ ವುಹಾನ್ ಸೇರಿದಂತೆ ಚೀನಾದ ಐದು ನಗರಗಳು ಪಟ್ಟಿಯಲ್ಲಿ ಉನ್ನತ ಸ್ಥಾನದಲ್ಲಿವೆ. ಬೀಜಿಂಗ್ ನಂತರದ ಸ್ಥಾನದಲ್ಲಿ ನ್ಯೂಯಾರ್ಕ್, ಬೋಸ್ಟನ್, ಸ್ಯಾನ್ ಫ್ರಾನ್ಸಿಸ್ಕೊ ಹಾಗೂ ಷಾಂಗಾಯ್ ನಗರಗಳಿವೆ. ರ‍್ಯಾಂಕಿಂಗ್ ಅನ್ನು ನಿಗದಿಪಡಿಸಲು, ಸೈನ್ಸ್ ಜರ್ನಲ್‌ಗಳ ಗುಣಮಟ್ಟ, ಪೇಟೆಂಟ್‌ಗಳು, ವೈಜ್ಞಾನಿಕ ಸಂಶೋಧನೆಗಳು, ಸಂಶೋಧನೆಗೆ ಇರುವ ಸೌಲಭ್ಯಗಳನ್ನು ಪ್ರಮುಖವಾಗಿ ಪರಿಗಣಿಸಲಾಗಿದೆ. ವಿಜ್ಞಾನ ಸಂಸ್ಥೆಗಳು ವಿದೇಶಿ ವಿದ್ಯಾರ್ಥಿಗಳನ್ನು ಯಾವ ಪ್ರಮಾಣದಲ್ಲಿ ಆಕರ್ಷಿಸುತ್ತಿವೆ ಎನ್ನುವುದೂ ಮಾನದಂಡಗಳಲ್ಲೊಂದಾಗಿದೆ.

ವಿಜ್ಞಾನ ಕ್ಷೇತ್ರದಲ್ಲಿ ಅಮೆರಿಕದೊಂದಿಗೆ ಸ್ಪರ್ಧೆಯಲ್ಲಿರುವ ಚೀನಾ ಇತ್ತೀಚಿನ ವರ್ಷಗಳಲ್ಲಿ ವಿಶ್ವದ ಪ್ರಮುಖ ಶಕ್ತಿಯೊಂದಿಗೆ ಗುರ್ತಿಸಿಕೊಂಡಿದೆ. ಭಾರತ ತನ್ನ ಜಿಡಿಪಿಯಲ್ಲಿ ಸಂಶೋಧನಾ ಮತ್ತು ಅಭಿವೃದ್ಧಿ ಚಟುವಟಿಕೆಗಳಿಗಾಗಿ ಶೇ. 0.7ರಷ್ಟನ್ನು ತೊಡಗಿಸುತ್ತಿದ್ದರೆ, ಚೀನಾ ಶೇ. 2.1ರಷ್ಟನ್ನು ವಿನಿಯೋಗಿಸುತ್ತಿದೆ. ಹೂಡಿಕೆಯ ಈ ಅಂತರವೇ ವಿಜ್ಞಾನ ಕ್ಷೇತ್ರದಲ್ಲಿ ಭಾರತದ ಹಿನ್ನಡೆಗೆ ಪ್ರಮುಖ ಕಾರಣವಾಗಿದೆ. ಇದರ ಜೊತೆಗೆ ದೇಶದ ಶಾಲಾ ಕಾಲೇಜುಗಳಲ್ಲಿ ವಿಜ್ಞಾನ ಬೋಧನೆಯ ಗುಣಮಟ್ಟವೂ ಹೇಳಿಕೊಳ್ಳುವಂತಿಲ್ಲ. ವಿಶ್ವವಿದ್ಯಾಲಯ ಮಟ್ಟದಲ್ಲಿ ವಿಜ್ಞಾನದ ಕಲಿಕೆ ತೃಪ್ತಿಕರವಾಗಿಲ್ಲ. ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಸಂಬಂಧಿಸಿದಂತೆ ವಿಶ್ವದರ್ಜೆಯ ಸಂಸ್ಥೆಗಳು ನಮ್ಮಲ್ಲಿ ಇಲ್ಲವೇ ಇಲ್ಲ ಎನ್ನುವಷ್ಟು ಕಡಿಮೆ. ಹೈಸ್ಕೂಲ್ ನಂತರ ವಿಜ್ಞಾನವನ್ನು ಪ್ರಮುಖ ವಿಷಯವನ್ನಾಗಿ ಕಲಿಯಲು ಹಂಬಲಿಸುವ ವಿದ್ಯಾರ್ಥಿಗಳ ಸಂಖ್ಯೆಯೂ ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಿದೆ. ಇತ್ತೀಚಿನ ವರ್ಷಗಳಲ್ಲಿ ವಿಜ್ಞಾನದಲ್ಲಿ ಉನ್ನತ ಕಲಿಕೆಯ ಹಂಬಲವುಳ್ಳ ವಿದ್ಯಾರ್ಥಿಗಳು ವಿದೇಶಗಳ ದಾರಿ ಹಿಡಿಯುತ್ತಿದ್ದಾರೆ. ಕಲಿತ ನಂತರವೂ ಅವರ ಸಂಶೋಧನೆಅಧ್ಯಯನಕ್ಕೆ ತವರಿನಲ್ಲಿ ಹೆಚ್ಚಿನ ಅವಕಾಶಗಳು ಇಲ್ಲದಿರುವುದರಿಂದ ವಿದೇಶಗಳಲ್ಲೇ ನೆಲೆಸುತ್ತಾರೆ.

ದೇಶದ ಅಭಿವೃದ್ಧಿಯ ನಿಟ್ಟಿನಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳದ್ದು ಮಹತ್ವದ ಪಾತ್ರ. ದುರದೃಷ್ಟವಶಾತ್ ಈ ಕ್ಷೇತ್ರಗಳನ್ನು ಶೈಕ್ಷಣಿಕವಾಗಿ ಬಲಪಡಿಸುವ ಪ್ರಯತ್ನಗಳು ನಮ್ಮಲ್ಲಿ ನಡೆಯಬೇಕಾದಷ್ಟು ಪ್ರಮಾಣದಲ್ಲಿ ನಡೆಯುತ್ತಿಲ್ಲ. ಯುರೋಪಿನ ದೇಶಗಳಲ್ಲಿ ವೈಜ್ಞಾನಿಕ ಸಂಶೋಧನೆಗಳು ನಿರಂತರವಾಗಿ ನಡೆಯುತ್ತಿದ್ದರೆ, ನಮ್ಮಲ್ಲಿ ಹಣ ಮತ್ತು ಸವಲತ್ತುಗಳ ಕೊರತೆಯಿಂದ ವೈಜ್ಞಾನಿಕ ಚಟುವಟಿಕೆಗಳು ಸೊರಗಿವೆ. ಎಳೆಯ ಪ್ರತಿಭೆಗಳನ್ನು ಉತ್ತೇಜಿಸುವಂತಹ ವಾತಾವರಣವೂ ಇಲ್ಲ. ಕೊರೊನಾ ವೈರಾಣು ವಿಶ್ವವನ್ನು ಕಂಗೆಡಿಸಿರುವ ಸಂದರ್ಭದಲ್ಲಿ ವಿಜ್ಞಾನದ ಮಹತ್ವ ಮತ್ತೆ ಮುನ್ನೆಲೆಗೆ ಬಂದಿದೆ. ಸೈನಿಕ ಶಕ್ತಿ ಹಾಗೂ ಆರ್ಥಿಕ ಶಕ್ತಿಯಿಂದಷ್ಟೇ ದೇಶವನ್ನು ಬಲಿಷ್ಠವಾಗಿ ರೂಪಿಸುವ ಪರಿಕಲ್ಪನೆಗಳು ಈಗ ಹಳತಾಗಿವೆ. ವೈಜ್ಞಾನಿಕ ನೆಲೆಗಟ್ಟಿನ ಮೇಲೆ ಸಮಾಜ ಮತ್ತು ದೇಶವನ್ನು ರೂಪಿಸುವುದು ಇಂದಿನ ಅಗತ್ಯ.

ಭಾರತ ವಿಶ್ವದ ಬಲಿಷ್ಠ ಶಕ್ತಿಗಳಲ್ಲೊಂದು ಎನ್ನುವ ಜನಪ್ರಿಯ ಅಭಿಪ್ರಾಯ ಇತ್ತೀಚಿನ ವರ್ಷಗಳಲ್ಲಿ ಚಾಲ್ತಿಯಲ್ಲಿದೆ. ಆದರೆ, ಆ ಅಭಿಪ್ರಾಯಕ್ಕೆ ಪುಷ್ಟಿ ನೀಡುವಂತೆ ವಿಜ್ಞಾನ ಕ್ಷೇತ್ರದಲ್ಲಿನ ಬೆಳವಣಿಗೆಗಳು ನಡೆಯುತ್ತಿಲ್ಲ. ಭಾವಾವೇಶದ ಮಾತುಗಳನ್ನು ಬಿಟ್ಟು, ಗುಣಮಟ್ಟದ ವಿಜ್ಞಾನ ಸಂಸ್ಥೆಗಳನ್ನು ರೂಪಿಸಬೇಕಾಗಿದೆ. ಶಾಲಾ ಕಾಲೇಜು ಹಂತದಲ್ಲಿ ವಿಜ್ಞಾನದ ಗುಣಮಟ್ಟದ ಬೋಧನೆ ಸಾಧ್ಯವಾಗುವಂತೆ ಶಿಕ್ಷಣ ವ್ಯವಸ್ಥೆಯನ್ನು ಬಲಪಡಿಸಬೇಕು. ಇದರ ಜೊತೆಜೊತೆಗೆ, ವಿದ್ಯಾರ್ಥಿಗಳು ಮತ್ತು ಪೋಷಕರ ಒಲವನ್ನು ವಿಜ್ಞಾನದ ವಿಷಯಗಳತ್ತ ಸೆಳೆಯಬೇಕಾಗಿದೆ. ಅದು ಸಾಧ್ಯವಾಗಬೇಕಾದರೆ ಔದ್ಯೋಗಿಕ ಕ್ಷೇತ್ರದಲ್ಲಿ ವಿಜ್ಞಾನದ ಪದವಿ ಗಳಿಸಿದವರಿಗೆ ಹೆಚ್ಚಿನ ಅವಕಾಶಗಳು ದೊರೆಯಬೇಕು. ಸಂಶೋಧನೆ ಮತ್ತು ಅಭಿವೃದ್ಧಿ ಕ್ಷೇತ್ರದಲ್ಲಿ ಹೆಚ್ಚಿನ ಬಂಡವಾಳ ಹೂಡಿಕೆಯಾಗಬೇಕು. ವಿಜ್ಞಾನಶಕ್ತಿಯ ನೆರವಿಲ್ಲದೆ ಹೋದರೆ 'ಆತ್ಮನಿರ್ಭರ ಭಾರತ'ದ ಪರಿಕಲ್ಪನೆ ಮಾತಿನಲ್ಲಷ್ಟೇ ಉಳಿಯುತ್ತದೆ. 'ವಿಜ್ಞಾನ ದೀವಿಗೆಯ ಹಿಡಿಯ ಬನ್ನಿ' ಎನ್ನುವ ಕುವೆಂಪು ಅವರ ಮಾತು ನಮ್ಮೆಲ್ಲರ ಎದೆಯ ಮಾತಾಗಬೇಕು.

■ ರಘುನಾಥ ಚ.ಹ.